# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿಯವರನ್ನು ಬಿಡುವಿನ/ ಬಿಡುವುರಹಿತ ಸಿಬ್ಬಂದಿಗಳು ಎಂದು ಪರಿಗಣಿಸುವ ಬಗ್ಗೆ.

*****

ಓದಲಾಗಿದೆ: 1. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ ಡಿಟಿಇ/31/ಇಎಸ್‌ಟಿ(8)ಬಿ/2011 ದಿನಾಂಕ 05-07-2012 ಹಾಗೂ 12-10-2012.

2. ಸರ್ಕಾರದ ಆದೇಶ ಸಂಖ್ಯೆ ಇಡಿ 195 ಟಿಪಿಇ 2003, ದಿನಾಂಕ 07-06-2013.

ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು, ಅಂದರೆ ಪ್ರಾಚಾರ್ಯರು, ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರುಗಳಿಗೆ ಗಳಿಕೆ ಮತ್ತು ಪರಿವರ್ತಿತ ರಜೆ ಸೌಲಭ್ಯ ನೀಡುವ ಸಲುವಾಗಿ ಅವರುಗಳು ಯಾವ ವರ್ಗಕ್ಕೆ ಅಂದರೆ, ಬಿಡುವಿನ ಅಥವಾ ಬಿಡುವು ರಹಿತ ಸಿಬ್ಬಂದಿಗಳ ವರ್ಗಕ್ಕೆ ಸೇರಿದವರು ಎಂಬ ಬಗ್ಗೆ ಮಾಹಿತಿ ನೀಡುವಂತೆ ಮಹಾಲೇಖಪಾಲರು ದಿನಾಂಕ 28/11/2011ರ ಪತ್ರ ಸಂಖ್ಯೆ GEXI/G/2011-12/1374ರಲ್ಲಿ ಕೋರಿರುವ ಮೇರೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಪರೀಕ್ಷಾ ಪದ್ಧತಿಯಲ್ಲಿ ಏಕರೂಪವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ 2003-04ನೇ ಶೈಕ್ಷಣಿಕ ಸಾಲಿನಿಂದ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ. ಅದರಂತೆ ಸೆಮಿಸ್ಟರ್ ಪದ್ಧತಿಯಡಿಯಲ್ಲಿ ನಿಯಮಿತ ತರಗತಿ ಹಾಗೂ ಪರೀಕ್ಷಾ ಕಾರ್ಯಗಳಲ್ಲಿ ನಿರತರಾಗುವ ಬೋಧಕ ಮತ್ತು ಮಾರ್ಗದರ್ಶಕ ಸಿಬ್ಬಂದಿಗಳನ್ನು "ಬಿಡುವಿಲ್ಲದ ಸಿಬ್ಬಂದಿಗಳು" (Non vacation staff) ಎಂದು ಕ್ರಮಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪರಿಗಣಿಸಿ ಆದೇಶಿಸಲಾಗಿರುತ್ತದೆ.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳು ಸುಸಂಗತವಾಗಿ ಮತ್ತು ಸಮಯೋಚಿತವಾಗಿ ನಿರ್ವಹಿಸುವಲ್ಲಿ ಆಯಾಯ ವಿಭಾಗಗಳ ಮುಖ್ಯಸ್ಥರ ಪಾತ್ರ ಮಹತ್ವದ್ದಾಗಿರುತ್ತದೆ. ಸಂಸ್ಥೆಯ ಆಡಳಿತ ಮುಖ್ಯಸ್ಥರಾಗಿ ಪ್ರಾಚಾರ್ಯರು ಕಾರ್ಯನಿರ್ವಹಿಸುವುದರಿಂದ ಅವರನ್ನು ಬಿಡುವು ರಹಿತ ಸಿಬ್ಬಂದಿ ವರ್ಗವೆಂದು ಪರಿಗಣಿಸುವುದು ಸೂಕ್ತವಾಗಿರುತ್ತದೆ. ಪ್ರಸಕ್ತ ಜಾರಿಯಲ್ಲಿರುವ ಸರ್ಕಾರಿ ಆದೇಶ ಮತ್ತು ಎಐಸಿಟಿಇ ನಿಯಮ ಪ್ರಕಾರ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಆಯಾಯ ಕೋರ್ಸಿನ ವಿಭಾಗಾಧಿಕಾರಿ ಹುದ್ದೆ ಅಸ್ತಿತ್ವದಲ್ಲಿರುವುದಿಲ್ಲವಾದ್ದರಿಂದ ಶೈಕ್ಷಣಿಕ, ಪರೀಕ್ಷಾ ಮತ್ತು ಆಡಳಿತ ಹಿತದೃಷ್ಟಿಯಿಂದ ಆಯಾ ಕೋರ್ಸಿನಲ್ಲಿ ವಿಭಾಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರಲ್ಲಿ ಒಬ್ಬರ ಸೇವೆ ಅವಶ್ಯಕವೆಂದು ಕಂಡುಬಂದಲ್ಲಿ, ಅವರನ್ನು ಬಿಡುವುರಹಿತ

ಸಿಬ್ಬಂದಿಯೆಂದು ಪರಿಗಣಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸುತ್ತಾ ಈ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

**ಸರ್ಕಾರದ ಆದೇಶ ಸಂಖ್ಯೆ ಇಡಿ 300 ಡಿಟಿಇ 2012,**
**ಬೆಂಗಳೂರು, ದಿನಾಂಕ 22ನೇ ಡಿಸೆಂಬರ್ 2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 113ರಡಿಯಲ್ಲಿ ಕಲ್ಪಿತವಾಗಿರುವ ಅವಕಾಶಗಳನ್ವಯ ಪರಿಶೀಲಿಸಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರು, ಮತ್ತು ಪ್ರಾಂಶುಪಾಲರು ಸೂಚಿಸಿದ ವಿಭಾಗದ ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರಲ್ಲಿ ಒಬ್ಬರ ಸೇವೆ ಅವಶ್ಯಕವೆಂದು ಕಂಡುಬಂದಲ್ಲಿ, ಅವರನ್ನು ಆಡಳಿತ ಹಿತದೃಷ್ಟಿಯಿಂದ ಬಿಡುವುರಹಿತ ಸಿಬ್ಬಂದಿಗಳು (Non vacation staff) ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
-ಸಹಿ-
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಇವರಿಗೆ,
ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು.

**ಹಿಂಬರಹ**

ಸಂಖ್ಯೆ: ಡಿಟಿಇ 31 ಇಎಸ್‌ಟಿ 8(ಬಿ)2012 ದಿನಾಂಕ: 03/01/2015.

ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ರವಾನಿಸಲಾಗಿದೆ.

ಆಡಳಿತಾಧಿಕಾರಿ

**ಇವರಿಗೆ:**

1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ.
2. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ವಲಯ, ಬೆಂಗಳೂರು.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಇಎಸ್‌ಟಿ (1) ರಿಂದ (10) ವಿಭಾಗಗಳಿಗೆ.
4. ಕಛೇರಿ ಪ್ರತಿ.